ಶ್ರೀ ಅರಗ ಜ್ಞಾನೇಂದ್ರ : ಅದರ ಬಗ್ಗೆ ನನ್ನ ತಕರಾರು ಇಲ್ಲ. ಮೆಟೀರಿಯಲ್ಸ್ ಇಲ್ಲವೇ ಎಂದರೆ ಸರಿ. ಆದರೆ ಇಲ್ಲೀಗಲ್ ಕನೆಕ್ಷನ್‌ಗೆ ನಿಮ್ಮ ಅಧಿಕಾರಿಗಳೆಲ್ಲಾ ಕೊಡುತ್ತಿದ್ದಾರೆ. ನಾವು ಕೇಳಿದರೆ ವೈರ್ ಇಲ್ಲ, ಕಂಬ ಇಲ್ಲ ಎಂದು ಹೇಳುತ್ತಾರೆ. ಇಂತಿಂಥ ಪ್ರಾಜೆಕ್ಟ್‌ಗಳಿಗೆ ಕೋಟಿಗಟ್ಟಲೆ ಹಣವನ್ನು ಲ್ಯಾಪ್ಸ್ ಮಾಡುತ್ತಾರೆ ಎನ್ನುವುದಾದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಚರ್ಚೆ ಬೇಡ. He will take action

ಅರಕಲಗೂಡಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಕ್ರಮವಾಗಿ ಸಿಮೆಂಟ್ ದುರುಪಯೋಗ ಮಾಡಿರುವುದು.

ಶ್ರೀ ಎಂ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 19ನೇ ತಾರೀಖು ನಮ್ಮ ಅರಕಲಗೂಡಿನಲ್ಲಿ ಇರತಕ್ಕಂಥ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಒಂದು ಉಪವಿಭಾಗಕ್ಕೆ ಸೇರಿದಂತಹ ಸಿಮೆಂಟ್‌ನ್ನು ಅಕ್ರಮವಾಗಿ ಅದೇ ಇಲಾಖೆಗೆ ಸೇರಿದಂತಹ ಲಾರಿ ಸಿ.ಎ.ಜಿ. 5917ರಲ್ಲಿ ತುಂಬಿಕೊಂಡು ಹಾಸನದ ಅವರ ಮನೆಗೆ ಸಾಗಿಸುತ್ತಿದ್ದಾಗ, ಸಾರ್ವಜನಿಕರು ಅದನ್ನು ಗುರುತು ಮಾಡಿ ಅದನ್ನು ಜಿಲ್ಲಾ ಪಂಚಾಯತ್ ಅಧಿಕಾರಿಗಳು ಕೂಡ ಹೋಗಿ ಅದನ್ನು ಕಣ್ಣಾರೆ ನೋಡಿದ್ದಾರೆ. ಹಾಸನ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ಆಡಳಿತ ನಡೆಯುತ್ತಿದೆ ಎನ್ನುವುದಕ್ಕೆ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಅದಕ್ಕೋಸ್ಕರ ಇಲ್ಲಿಂದ ಸ್ಪಷ್ಟವಾಗಿ ಮೆಸೇಜ್ ಹೋಗಬೇಕು. ಇಲ್ಲಿ ಏನು ಅಕ್ರಮವಾಗಿ ಸಾಗಿಸುತ್ತಿದ್ದು, ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ದುರುಪಯೋಗ ಎಂದರೆ ಸಿಮೆಂಟನ್ನು ಎಲ್ಲಾದರೂ ಮಣ್ಣಿನಲ್ಲಿ ಬಿಟ್ಟಿದ್ದಾರೋ?

ಶ್ರೀ ಎ.ಟಿ. ರಾಮಸ್ವಾಮಿ : ಸ್ವಂತಕ್ಕೆ ಅವರ ಮನೆ ಕಟ್ಟುವುದಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಅಧ್ಯಕ್ಷರು : ಅದು ಕಟ್ಟಡದ ಸಾಮಾನು, ಕಟ್ಟಡಕ್ಕೆ ತಾನೇ ಉಪಯೋಗಿಸಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಅದು ದುರುಪಯೋಗವಲ್ಲ. ಅದು ಸದುಪಯೋಗವೇ. ತಮ್ಮ್ಮವ್ಯಂಗ್ಯ ಅರ್ಥವಾಯಿತು. ಮಾನ್ಯ ರಾಮಸ್ವಾಮಿಯವರು ನನ್ನ ಗಮನಕ್ಕೆ ಅದನ್ನು ತಂದಿದ್ದಾರೆ. ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಕೇಸ್ ಕೂಡ ಹಾಕಬೇಕು ಮತ್ತು ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಆದೇಶ ಕಳುಹಿಸಿಕೊಟ್ಟಿದ್ದೇನೆ. ಅದರ ವರದಿ ಬರುತ್ತದೆ. ಬಂದಮೇಲೆ ಅಮಾನತ್ತಿನಲ್ಲಿ ಇರುವ ಬಗ್ಗೆ ಕೂಡ ನಾನು ಯೋಚನೆ ಮಾಡುತ್ತೇನೆ.

ಆಲಮಟ್ಟಿಯೋಜನೆಯ ಪುನರ್ವಸತಿ ಅಧಿಕಾರಿಗಳು ಶಾಸಕರ ಮೇಲೆ ಮಾಡಿರುವ ಆರೋಪ

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ) : ಮಾನ್ಯ ಅಧ್ಯಕ್ಷರೇ, ದಿನಾಂಕ 20.2.97ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸಿ. ಜಾಮೆದಾರ್. ಆಯುಕ್ತರು, ಆಲಮಟ್ಟಿ ಯೋಜನೆ ಎಳೆದು

ಸಾರ್ವಜನಿಕವಾಗಿ ನನಗೆ ಬಹಳ ಹಾನಿ ಮಾಡಿದ್ದಾರೆ. ಏಕೆಂದರೆ ಪುನರ್ ವಸತಿ ಕೇಂದ್ರವನ್ನೂ ಕೊನ್ನೂರಿಗೆ ಮೊದಲು ಮಾಡಿದ್ದರು. ಆ ವಿಷಯದಲ್ಲಿ ನಾನು ಯಾವುದೇ ರೀತಿಯಲ್ಲಿ ಭಾಗಿಯಾಗಿರಲಿಲ್ಲ. ಆದರೂ ಸಹ ಸಾರ್ವಜನಿಕರ ಎದುರು ಅದಲ್ಲದೆ ಸಂಬಂಧಿಸಿದ ನೀರಾವರಿ ಮಂತ್ರಿಗಳ ಮೂಲಕ ಸಹ ನಾನು ಒಬ್ಬ ಶಾಸಕನಾಗಿ ರಾಜಕಾರಣ ಮಾಡುತ್ತೇವೆಂದು ಕಂಪ್ಲೀಟ್ ಮಾಡಿದ್ದಾರೆ. ಇದರಿಂದ ನನ್ನ ಮಾನ ಹಾನಿಯಾಗಿದೆ, ತಾವು ನನ್ನ ರಕ್ಷಣೆಗೆ ಬರಬೇಕು ಒಬ್ಬ ಅಧಿಕಾರಿ ಸಾರ್ವಜನಿಕವಾಗಿ ನನ್ನ ಹೆಸರು ಎಳೆದಿರುವುದರಿಂದ ನನಗೆ ಹಾನಿಯಾಗಿದೆ, ಅದು ಆಗದಂತೆ ನೋಡಿಕೊಳ್ಳಬೇಕೆಂದು ಈ ಸದನದ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿದಮೇಲೆ ನಾನೇ ನನ್ನ ಕಚೇರಿಯಿಂದ ಜಾಮೇದಾರ್‌ಗೆ ಫೋನ್ ಮಾಡಿಸಿ ವಿಚಾರವನ್ನೆಲ್ಲಾ ತಿಳಿದುಕೊಂಡೆ. ಕೊನ್ನೂರಿನಲ್ಲಿ ಪುನರ್ವಸತಿ ಕೇಂದ್ರ ಮಾಡುವುದಕ್ಕೆ ತಾವೇನೂ ಆಕ್ಷೇಪಣೆ ವ್ಯಕ್ತಪಡಿಸಿಲ್ಲವೆನ್ನುವಂತಹ ಮಾತನ್ನು ಅವರು ಹೇಳಿದರು. ಒಂದು ಪತ್ರಿಕೆಯಲ್ಲಿ ಮಾತ್ರ ನೀವು ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ ಎನ್ನುವ ಅರ್ಥ ಬಂತು. ಗಲಗಲಿಯಲ್ಲಿ ಹೆಚ್ಚು ಜನಸಂಖ್ಯೆ ಇರತಕ್ಕಂಥ ಜಾಗ, ಅಲ್ಲಿ ಆದ್ಯತೆ ಕೊಡದೇ ಇಲ್ಲಿ ಮಾಡಿರುವುದರಿಂದ ನಿಮಗೆ ಅಲ್ಲಿ ಕೆಟ್ಟ ಹೆಸರು ಬರುತ್ತದೆ ಎನ್ನುವಂತಹ ನೋವನ್ನು ವ್ಯಕ್ತಪಡಿಸಿದ್ದೀರಿ. ಜಾಮೆದಾರ್ ಕೂಡ ನನಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಯಾವುದೇ ಕಾರಣಕ್ಕೂ ಇತಿಮಿತಿ ಮೀರುವುದಾದಲ್ಲಿ ರಾಜಕಾರಣ ಮಾಡುವುದಕ್ಕಾಗಲಿ, ನಿಮಗೆ ಕೆಟ್ಟ ಹೆಸರು ತರುವಂತಹ ಉದ್ದೇಶವಿಲ್ಲ. ನಾನೂ ಕೂಡ ಅವರಿಗೆ ಸೂಚನೆ ಕೊಟ್ಟಿದ್ದೇನೆ. ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ತಿಳಿಸುತ್ತೇನೆ. ತಾವು ಹೊಸಬರಿದ್ದೀರಿ. ಯಾವುದೇ ಕಾರಣಕ್ಕೆ ಮನಸ್ಸಿಗೆ ಬೇಸರ ಮಾಡಿಕೊಳ್ಳಬೇಡಿ. ನಿಮ್ಮ ವ್ಯಕ್ತಿತ್ವಕ್ಕೆ ನಿಮ್ಮ ಗೌರವಕ್ಕೆ ತೊಂದರೆ ಆಗಲಾರದಂತಹ ರೀತಿಯಲ್ಲಿ ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿಯನ್ನು ನಾನೇ ಖುದ್ದಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ : ಇಷ್ಟು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ, ಆ ಜನರಿಗೆ ಏನು ತಪ್ಪು ಕಲ್ಪನೆ ಕೊಟ್ಟಿದ್ದಾರೆ. ಆ ಗಲಗಲಿ ಗ್ರಾಮಸ್ಥರಿಗೆ...

ಅಧ್ಯಕ್ಷರು : ಇಲ್ಲೇ ಹೇಳುತ್ತೇನೆ. ಪತ್ರಿಕೆಯವರೂ ಕೂಡ ಇದ್ದಾರೆ. ಗಲಗಲಿ ಗ್ರಾಮದಲ್ಲಿ ಆಗುವುದಕ್ಕೆ ತಾವು ಏನು ಒತ್ತಾಯ ಮಾಡಿದ್ದೀರಿ ಅದು ಸ್ಪಷ್ಟ. ಮತ್ತು ಕೊನ್ನೂರಿನಲ್ಲಿ ಆಗುವುದಕ್ಕೆ ತಾವೇನು ಆಕ್ಷೇಪಣೆ ವ್ಯಕ್ತಪಡಿಸಿಲ್ಲ ಎನ್ನುವುದನ್ನು ಹೇಳಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ : ಅಷ್ಟೇ ಅಲ್ಲ, ನನಗೆ ಸಂಬಂಧ ಕೂಡ ಇಲ್ಲ.

ಅಧ್ಯಕ್ಷರು : ನಿಮಗೆ ಏನೂ ಸಂಬಂಧ ಇಲ್ಲ ಎಂದೇ ಹೇಳೋಣ. ನಾನು ಹಾಗೆ ಸ್ಪಷ್ಟೀಕರಣ ಕೊಡುತ್ತೇನೆ.